ರೈತರಿಗೆ ನೀಡುತ್ತಿರುವ ಸಾಲದ ಮೇಲಿನ ಸಹಾಯಧನ

18 (34) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರೈತರಿಗೆ ನೀಡುತ್ತಿರುವ ಕೃಷಿ ಸಾಲಕ್ಕೆ ಸ್ಥಳೀಯ ಸಹಕಾರ ಸಂಘಗಳಿಗೆ / ಬ್ಯಾಂಕುಗಳಿಗೆ ಸರ್ಕಾರ ಎಷ್ಟು ಪ್ರಮಾಣದ ಸಹಾಯಧನವನ್ನು ನೀಡುತ್ತಿದೆ ;

ಆ) ಈ ಸಹಾಯಧನ ರೈತರಿಗೆ ಸೇರುತ್ತಿರುವ ಬಗ್ಗೆ ಸರ್ಕಾರ ನಿಗಾವಹಿಸಿದೆಯೇ ;

ಇ) ಈ ವರ್ಷ ರೈತರಿಗೆ ಎಷ್ಟು ಪ್ರಮಾಣದಲ್ಲಿ ಕೃಷಿ ಸಾಲ ನೀಡಲು ಉದ್ದೇಶಿಸಿದೆ ; (ವಿವರ ನೀಡುವುದು) ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಸರ್ಕಾರವು ರೈತರಿಗೆ ನೀಡುತ್ತಿರುವ ಕೃಷಿ ಸಾಲಕ್ಕೆ ಸ್ಥಳೀಯ ಸಹಕಾರ ಸಂಘಗಳಿಗೆ/ಬ್ಯಾಂಕುಗಳಿಗೆ ಸರ್ಕಾರ ನೀಡುತ್ತಿರುವ ಸಹಾಯಧನದ ವಿವರವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

ವರ್ಷ	ಸರ್ಕಾರ ನೀಡುತ್ತಿರುವ ಬಡ್ಡಿ ಸಹಾಯ ಧನ	
	ಅಲ್ಪಾವಧಿ ಸಾಲ (ಶೇಕಡ)	ದೀರ್ಘಾವಧಿ ಸಾಲ (ಶೇಕಡ)
2004–05 ರಿಂದ 2005–06ರ ವರೆಗೆ	5.50	5.50

ವರ್ಷ	ಸರ್ಕಾರ ನೀಡುತ್ತಿರುವ ಬಡ್ಡಿ ಸಹಾಯ ಧನ	
	ಅಲ್ಪಾವಧಿ ಸಾಲ (ಶೇಕಡ)	ದೀರ್ಘಾವಧಿ ಸಾಲ (ಶೇಕಡ)
2006–07	3.00 – ನಬಾರ್ಡ್‌ನಿಂದ ಪಡೆದ ಸಾಲಗಳ ಮೇಲೆ 5.50 – ಸಹಕಾರ ಸಂಸ್ಥೆಗಳ ಸ್ವಂತ ಬಂಡವಾಳದಿಂದ ವಿತರಿಸಿದ ಸಾಲಗಳ ಮೇಲೆ	7.50
2007–08	4.00 – ನಬಾರ್ಡ್‌ನಿಂದ ಪಡೆದ ಸಾಲಗಳ ಮೇಲೆ 6.50 – ಸಹಕಾರ ಸಂಸ್ಥೆಗಳ ಸ್ವಂತ ಬಂಡವಾಳದಿಂದ ವಿತರಿಸಿದ ಸಾಲಗಳ ಮೇಲೆ	9.00
2008–09	7.10	11.75
2009–10	(6.50+1)=7.50 ಅವಧಿಯೊಳಗೆ ಮರುಪಾವತಿಸಿದ ಸಾಲಗಳ ಮೇಲೆ ಶೇ.1ರ ಅಧಿಕ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.	10.75
2010–11	(6.50+1.25)=7.75	9.25

ಆ) ಸಹಾಯಧನ ರೈತರಿಗೆ ಸೇರುತ್ತಿರುವ ಬಗ್ಗೆ ಸರ್ಕಾರ ನಿಗಾವಹಿಸಿದೆ. ರೈತರು ನಿಗದಿಪಡಿಸಿದ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಮರುಪಾವತಿ ಮಾಡಿದ ಕೂಡಲೇ ಸರ್ಕಾರ ಭರಿಸಬೇಕಾದ ಬಡ್ಡಿ ಸಹಾಯ ಧನವನ್ನು ರೈತರ ಖಾತೆಗೆ ಜಮಾ ನೀಡಿ ಸರ್ಕಾರ ಭರಿಸಬೇಕಾಗಿದ್ದು ಎಂದು

ಲೆಕ್ಕ ಮಾಡಿಕೊಂಡು ಸಹಕಾರ ಸಂಸ್ಥೆಗಳು ಕ್ಲೈಂ ಬಿಲ್ಲುಗಳನ್ನು ತಯಾರಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರು ಬಿಲ್ಲುಗಳನ್ನು ದೃಢೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಿದ ನಂತರವೇ ಬಡ್ಡಿ ಸಹಾಯಧನ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದ್ದು 2010-11ನೇ ಸಾಲಿನಲ್ಲಿ ಇದುವರೆಗೆ ರೂ. 104.72 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) 2010-11ನೇ ಸಾಲಿಗೆ ರೈತರಿಗೆ ವಿತರಿಸಬೇಕಾದ ಸಾಲದ ಪ್ರಮಾಣ ವಿವರವನ್ನು ಈ ಕೆಳಗೆ ಕಾಣಿಸಲಾಗಿದೆ.

(ರೂ.ಕೋಟಿಗಳಲ್ಲಿ)

ಸಾಲದ ವಿವರ	ಗುರಿ
ಅಲ್ಪಾವಧಿ ಮತ್ತು ಮಧ್ಯಮಾವಧಿ	4297.33
ದೀರ್ಘಾವಧಿ	250.00
ಒಟ್ಟು	4547.33

ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿ

19 (35) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳು ನಾದುರಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;